ಕ್ರಮ

ದಿನಾಂಕ: 05.01.2019 ರಂದು ಬೆಳಗ್ಗೆ 9.00 ಗಂಟೆಗೆ ಮಾನ್ಯ ನಗರಪಾಲಿಕೆ ಸದಸ್ಯರು, ವಾರ್ಡ್ ನಂ. 41 ರವರ ಕೊಠಡಿಯಲ್ಲಿ ಅಧ್ಯಕ್ಷರ ನೇತ್ರತ್ವದಲ್ಲಿ ವಾರ್ಡ್‌ಗಳಲ್ಲಿ ಇವರು ಕುಂದು ಕೊರತೆಗಳ ಬಗ್ಗೆ ವಾರ್ಡ್ ಸಮಿತಿ ಸಭೆಯ ನಡವಳಿಕೆಗಳು:

ಸಭೆಗೆ ಹಾಜರಿದ್ದ ಸದಸ್ಯರು:

7. ಅಧ್ಯಕ್ಷರು: ಶ್ರೀಮತಿ ಲಲಿತಾ ತ್ರಿಮ್ಮನಂಜಯ್ಯ
8. ಕಾರ್ಯದರ್ಶಿ: ~~ಶ್ರೀಮತಿ. ಎಲ್. ನಾಗರತ್ನ~~, ಸ.ಕಂ.ಅ.(ಪೀ.ಕೈ.ಪ್ರ)
9. ಸದಸ್ಯರು:
   1. ದೇವರಾಜ್
   2. ನರಸಿಂಹಗೌಡ
   3. ಆನಂದಣ್ಣ ಶಿವಪುರ
   4. ಎನ್.ಟಿ.ರಾಜಣ್ಣ
   5. ಹಳೆ ರಂಗಯ್ಯ
   6. ಸುಬ್ರಮಣಿ
   7. ಗುರುನಾಥ್
   8. ಚಿಕ್ಕಮಂಜಣ್ಣ
   9. ರಂಗಸ್ವಾಮಯ್ಯ
   10. ನವೀನ (ಮುನಿಯ)
   11. ರವಿ
   12. ಡಾ.ರಮೇಶ್.
   13. ಮಂಜುನಾಥ್ ನಾಗಯ್ಯ
   14. ಚಂದ್ರಪ್ಪ
   15. ಜಯಲಕ್ಷ್ಮಿ, ರೇಣುಕಾ
   16. ನಾರಾಯಣಪ್ಪ

ಬಿ.ಬಿ.ಎಂ.ಪಿ.ಯಿಂದ ಹಾಜರಿದ್ದ ಸಿಬ್ಬಂದಿ:

9. ~~ವೆಂಕಟೇಶ್~~, ಸಹಾಯಕ ಅಭಿಯಂತರರು
10. ಶಂಕರ್. ಮೌ,ಮಾ
11. ಬಸವರಾಜು, ಕಂ.ಪ
12. ಮಂಜುನಾಥ್.ಕಂ.ವ

ಸಭೆಗೆ ಹಾಜರಾದ ಎಲ್ಲಾ ಸದಸ್ಯರುಗಳನ್ನು ಅಧ್ಯಕ್ಷರು ಸ್ವಾಗತಿಸಿ, ವಾರ್ಡ್ ನಂ. 41ರ ಅಭಿವೃದ್ದಿಗೆ ಮತ್ತು ಕೆಲಸ ಕಾರ್ಯಗಳಿಗೆ ನಾವೆಲ್ಲರೂ ಒಮ್ಮತದಿಂದ ಶ್ರದ್ದೆ ವಹಿಸಿ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತೆ ಅಧ್ಯಕ್ಷರು ಸದಸ್ಯರುಗಳಿಗೆ ತಿಳಿಸಿದರು, ಈ ವಿಷಯಕ್ಕೆ ಸರ್ವಾನುಮತದಿಂದ ಸದಸ್ಯರೆಲ್ಲರೂ ಒಪ್ಪಿಗೆ ಸೂಚಿಸಿದರು.

1. ಮೊದಲನೆಯದಾಗಿ ರಾಜಗೋಪಾಲನಗರದ ನಿವಾಸಿಗಳು ಒಂಟಿ ಮನೆಗಳಿಗೆ ಅರ್ಜಿ ಸಲ್ಲಿಸಿದ್ದು, ಆಯುಕ್ತರ ಆದೇಶದ ಮೇರೆಗೆ ರಾಜಗೋಪಾಲನಗರದ ನಿವಾಸಿ ನಾಗರೀಕ ಬಂದುಗಳೆಲ್ಲರೂ ಸಭೆ ನಡೆಸುವ ಸಮಯಕ್ಕೆ ಹಾಝುರಾಗಿದ್ದು, ಒಚಿಟಿ ಮನೆಗಳಿಗೆ ಅರ್ಜಿ ಸಲ್ಲಿ ಸುಮಾರು 6 ತಿಂಗಳಾಗಿದ್ದು, ಈವರೆವಿಗೂ ಯಾವುದೇ ತರಹದ ಮುನ್ಸೂಚನೆಗಳಿಲ್ಲದ್ದರಿಂದ ಸದಸ್ಯರನ್ನು ಆ ಭಾಗದ ವಾರ್ಡ್ ಕಮಿಟಿಯ ಪ್ರತಿನಿದಿಯಾದ ಜಯಲಕ್ಷ್ಮಿ, ರೇಣುಕಮ್ಮ. ಮುತ್ತಕ್ಕ ಹಾಗೂ ಪ್ರಸನ್ನ, ಹಾಗೂ ಸುಶೀಲ್ ಕುಮಾರ್‌ರವರು ದಯಮಾಡಿ ಅಧ್ಯಕ್ಷರೇ ತೀರಾ ಬಡ ಕುಟುಂಬದವರಾಗಿದ್ದರಿಂದ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಾದರಿಂದ ಪಾಲಿಕೆಯಿಂದ ತೀರಾ ಬಡವರಿಗೆ ಅನ್ಯಾಯವಾಗುತ್ತಿದ್ದು, ದಯಮಾಡಿ ಇವರುಗಳಿಗೆ ಒಂಟಿ ಮನೆ ನಿರ್ಮಾಣಕ್ಕಾಗಿ ಫಲಾನುಭವಿಗಳಿಗೆ ಕಾರ್ಯಾದೇಶವನ್ನು ನೀಡುತ್ತೀರ ಎಂದು ನಂಬಿರುತ್ತೇವೆ, ಹಾಗೂ ಈವರೆಗೂ ಒಂಟಿ ಮನೆಗಳಿಗೆ ಕಾರ್ಯಾದೇಶ ನೀಡಿದಂತ ಫಲಾನುಭವಿಗಳಿಗೆ 1 ನೇ ಸುತ್ತಿನ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ ಸುಮಾರು ವರ್ಷಗಟ್ಟಲೇ ಹಣ ತೆಗೆದುಕೊಳ್ಳಲು

ಕಾಲಾವಕಾಶ ತೆಗೆದುಕೊಂಡರೆ ನೀವು ಕೊಡುವ ಹಣವು ಬಡ್ಡಿಯನ್ನು ಕಟ್ಟಲು ಅಷ್ಟೆ ಸಹಾಯವಾಗುತ್ತದೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.

2. ಜಲಮಂಡಳಿಗೆ ತೀರಾ ಮಳೆಗಾಲವಾಗಿದ್ದು, ಕಾವೇರಿ ಜಲಮಂಡಳೀ ಸಮಯಕ್ಕೆ ಸರಿಯಾಗಿ ನೀರಿನ ವ್ಯವಸ್ಥೆ ಮಾಡುತ್ತಿಲ್ಲ, ಗೃಹಲಕ್ಷ್ಮಿ ಬಡಾವಣೆ, ರಾಜೇಶ್ವರಿನಗರ, ಶಿವಪುರ, ನೆಲಗದರನಹಳ್ಳೀ ಈ ಭಾಗದಲ್ಲಿ 10 ದಿನಕ್ಕೊಮ್ಮೆ ನೀರನ್ನು ಸರಬರಾಜು ಮಾಡುತ್ತಿರುತ್ತಾರೆ, ಸಾರ್ವಜನಿಕರಾದ ನಾವು ಪ್ರತಿನ ಅವಶ್ಯಕತೆ ಇರುವಂತಹ ನೀರಿಗಾಗಿ ಹಣ ಪಾವತಿಸುತ್ತಿದ್ದು, ನೀರು ನೀಡದಿರುವ ಜಲಮಂಡಳಿಯ ವಿರುದ್ಧ ನಿಮ್ಮ ಮುಖೇನ ಚಳುವಳಿ ಹಾಗೂ ಹೋರಾಟ ನಡೆಸಲು ಮುಂದಾಗಲು ನಿಮ್ಮ ಅಪ್ಪಣೆ ಬೇಕಾಗಿದೆ, ಇಲ್ಲವಾದಲ್ಲಿ ತಾವೇ ಖುದ್ದಾಗಿ ಜಲಮಂಡಳಿಗೆ ಒಂದು ಬಾರಿ ತಿಳಿಸಿ ಮುಂದಿನ ಕ್ರಮಕ್ಕೆ ಒತ್ತುಕೊಡುತ್ತೀರೆಂದು ಗೃಹಲಕ್ಷ್ಮಿ ಭಗದ ವಾರ್ಡ್ ಕಮಿಟಿಯ ಸದಸ್ಯರಾದ ಗುರುನಾಥ್, ರಂಗಸ್ವಾಮಿ, ನಾಗರಾಜು, ಚಿಕ್ಕಮಂಜೇಗೌಡರು ತಿಳಿಸಿರುತ್ತಾರೆ, ಇದೇ ಜಲಮಂಡಳಿಯು ಸಂಬಂಧವಾಗಿ ಶಿವಪುರ, ನೆಲಗದರನಹಳ್ಳಿ ಹಾಗೂ ದುಗ್ಗಲಮ್ಮ ಬಡಾವಣೆ ಮತ್ತು ಲಗ್ಗೆರೆ ಮುಖ್ಯರಸ್ತೆಗೆ ಹೊಂದಿಕೊಂಡಂತಿರುವ ಪಾರ್ವತಿನಗರ, ಚಾಮುಂಡಿಪುರ, ರಾಜೇಶ್ವರಿನಗರ, ಈ ಭಾಗದಲ್ಲಿ ಸ್ಟಾರ್ ಮೋಟಾರ್ ಮೋರಿಯಲ್ಲಿ ಅಳವಡಿಸಿರುವಂತಹ ಸಬ್ ಲೈನ್‌ಗಳು ಬ್ಲಾಕ್ ಆಗಿದ್ದು, ಸರಿಪಡಿಸುವಂತೆ ಅಭಿಯಂತರರು ಹಾಗೂ ಸಹಾಯಕ ಅಭಿಯಂತರರಿಗೆ ವಾರ್ಡ್ ವೀಕ್ಷಣೆಗಾಗಿ ಕರೆಸಿ ಸ್ಥಳ ಪರಿಶೀಲನೆ ನಡೆಸಿ ಈ ಕೂಡಲೇ ಸರಿಪಡಿಸುತ್ತಿವೆಂದು ಭರವಸೆ ನೀಡಿದ್ದು, ಸುಮಾರು 3 ತಿಂಗಳಾದರೂ ಈ ಕಾಂಗಾರಿಯನ್ನು ಕೈಗೆತ್ತಿಕೊಳ್ಳದ ಕಾರಣ ಎಂಇ.ಐ. ಬಡಾವಣೆಯ ಕರಿಯಪ್ಪನವರು ಹಾಗು ರಾಮಣ್ಣನವರು ಜಲಮಂಡಳಿ ವಿರುದ್ಧ ನಿಮ್ಮ ಹೋರಾಟಕ್ಕೆ ನಾವು ಬಲಪಡಿಸುತ್ತೇವೆ ಎಂದು ಸಭೆಯಲ್ಲಿ ಅಧ್ಯಕ್ಷರನ್ನು ಈ ಕೂಡಲೇ ಕ್ರಮಕೈಗೊಳ್ಳುವಂತೆ ಶೀಘ್ರವೇ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಿದರು.

ಹಾಗೂ ಬೀದಿ ದೀಪಗಳ ಅವ್ಯವಸ್ಥೆಗಳ ಬಗ್ಗೆ ಗಮನ ಹರಿಸಬೇಕೆಂದು ಸಭೆಯಲ್ಲಿ ತಿಳಿಸಲಾಯಿತು.

ಸಭೆಗೆ ಗೈರು ಹಾಜರಾದ ಸದಸ್ಯರು:

6. ರವಿ
7. ಚಿಕ್ಕ ಮಂಜಣ್ಣ
8. ರಂಗಸ್ವಾಮಯ್ಯ
9. ಸುಬ್ರಮಣಿ

Lalitha Thimmananjaiah. K.LR
Corporator Ward No. 41,
Peenya Indl. Area,
Bruhat Bangalore Mahanagara Palike

ಕಾರ್ಯದರ್ಶಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 41.

ಪ್ರತಿಯನ್ನು:

5. ಮಾನ್ಯ ಜಂಟಿ ಆಯುಕ್ತರು(ದಾ.ವ) ಬಿಬಿಎಂಪಿ ರವರ ಮಾಹಿತಿಗಾಗಿ.
6. ಉಪ ಆಯುಕ್ತು (ದಾ.ವ) ಬಿಬಿಎಂಪಿ ರವರ ಮಾಹಿತಿಗಾಗಿ.
7. ಕಂದಾಯ ಅಧಿಕಾರಿ (ಹೆ.ವಿ) ಬಿಬಿಎಂಪಿ ರವರ ಮಾಹಿತಿಗಾಗಿ
8. ಕಛೇರಿ ಕಡತಕ್ಕೆ.

9448683161